ಗೋಡೆ, ಒಡೆದ ಕಾವಿ ಸಿಮೆಂಟ್ ನೆಲದ್ಮೇಲೆ ಹೆಜ್ಜೆಯಿಡಲು ಅಸಾಧ್ಯವಾದ ಬಾವಲಿ ಉಚ್ಚೆಹಿಕ್ಕೆ ಗಬ್ಬುನಾತ. ಒರಲೆ ಹತ್ತಿದ ಮುಂಡಿಗೆ ಕಂಬ, ಬಿಗಿ, ತೊಲೆ, ನಾಗಂದಿಗೆ, ಮುಚ್ಚಿಗೆ ಮುರಿದ ಮಾಡಲ್ಲಿ ಅಂತರ ಪಿಶಾಚಿಯಾಗಿ ಜೋತಾಡುತ್ತಿರುವ ಹಂಚು, ಪಕಾಶಿ, ರೀಪು.

'ಏನೋ ಅವಾಂತರ ಇದು...' ನಿಟ್ಟುಸಿರುಗರೆಯುತ್ತಾ ಕೇಳಿದೆ.

'ಅಪ್ಪಾ ಜಮೀನಿಗೆಲ್ಲಾ ಪಕ್ಕಾ ರೆಕಾರ್ಡ್ ಮಾಡಿಟ್ಟಿದ್ದ. ಆದರೆ, ತೋಟದ ದಿಡಗಿಯಲ್ಲಿದ್ದ ಇದಕ್ಕೆ ಮನೆದಳದ ರೆಕಾರ್ಡ್ ಮಾಡಿಸಿರಲಿಲ್ಲ, ಹಾಗಾಗಿ ರಿಜಿಸ್ಟರ್ ಮಾಡಿಸಲು ಸಾಧ್ಯವಾಗದೇ ಜಮೀನು ಕೊಂಡ ಉಮರಸಾಬ್ರಿ ಗಿದನ್ನು ಖರೀದಿಸಲು ಸಾಧ್ಯವಾಗಲಿಲ್ಲ. ನನ್ನ ಪಾಲಿಗೀಗ ಉಳಿದಿರುವುದು ಇದೊಂದೇ. ರಿಪೇರಿ ಮಾಡಿಸೋಣವೆಂದರೆ ಕೈಯಲ್ಲಿ ಕಾಸಿಲ್ಲ. ಅದರ್ಲಿ, ವಂಶವೃಕ್ಷದಲ್ಲಿ ಅಪ್ಪನ ಮತ್ತು ನನ್ನ ಹೆಸ್ರು ಕೈಬಿಡ್ತೀರಂತೆ ಹೌದಾ...?'

'ಅದೆಲ್ಲಾ ಅಷ್ಟು ಸುಲಭವಲ್ಲಕಣೋ...' ಸಮಾಧಾನ ಹೇಳಿ, ಪ್ರಶ್ನಿಸಿದೆ:

'ಗಡಿಕಲ್ಲಿನಾಚೆ ಈಚೆ ಬೇರೆಬೇರೇ ಅವತಾರ ತಾಳ್ತಿಯಂತೆ?'

'ಹೌದು, ಗಡಿಕಲ್ಲಾಚೆ ಕೊಪ್ಪ ತಾಲೂಕಿಗೆ (ಚಿಕ್ಕಮಗಳೂರು ಜಿಲ್ಲೆ) ಕಾಲಿಟ್ಟರೆ, ವಿಭೂತಿಪಟ್ಟೆ, ಕುಂಕುಮದ ಬೊಟ್ಟು, ಶಲ್ಯಹೊದ್ದ, ಕಚ್ಚೆ ಪಂಚೆಯುಟ್ಟ ಶುದ್ಧ ಬ್ರಾಹ್ಮಣ! ಗಡಿಕಲ್ಲೀಚೆ ತೀರ್ಥಹಳ್ಳಿ ತಾಲ್ಲೂಕಿಗೆ (ಶಿವಮೊಗ್ಗ ಜಿಲ್ಲೆ) ಬಂದ್ರೆ ಶೂದ್ರ! ವೇಷ ಬದಲಿಸುವ ಉಡುಪು, ಬಗಲಚೀಲದಲ್ಲಿ ಸದಾಸಿದ್ಧ!

'ಯಾಕಂಥ ವೇಷ?'

ಎಲ್ಲಾ ಜೀವನ ಕಲಿಸಿದ ಪಾಠ! ಜಮೀನು ಮಾರಿ ಊರು ಬಿಟ್ಟುಹೋದವ, ಮಠದ ಸ್ವಾಮಿಯೊಬ್ಬರ ಬಳಿ ಸೇರಿ, ಪೂಜೆ ಮಾಡುವಷ್ಟು ಮಂತ್ರ ಕಲಿತು ಪುಷ್ಕಳ ಭೋಜನ ಹೊಡೆದು ಉಂಡಾಡಿ ಗುಂಡನಾದೆ. ಸ್ವಾಮಿ, ಭೋಳೆ ಶಂಕರ! ಮಠದ ಆಸ್ತಿಪಾಸ್ತಿಗೆ ಕನ್ನ ಕೊರೆಯುವ ಐನಾತಿ ಏಜೆಂಟ್! ನಾನೂ ಏನು ಕಮ್ಮಿಯೆನಿಸಿ ಒಂದಿನ ಮಠದ ಕಾಣಿಕೆ ಡಬ್ಬಿಗೆ ಕೈಹಾಕಿ ಸಿಕ್ಕಿಬಿದ್ದೆ. ಹಿಡಿದು ಪೊಲೀಸರಿಗೆ ಕೊಟ್ಟರು, ಸ್ಟೇಷನ್‌ನಲ್ಲೆರಡು ದಿನ ಕೊಳೆ ಹಾಕಿ, ಇದ್ದ ದುಡ್ಡನ್ನೆಲ್ಲಾ ಪೊಲೀಸರೇ ಬಾಚಿಕೊಂಡು ಒದ್ದು ಹೊರ ಹಾಕಿದರು. ಅಲ್ಲಿಂದ ಓಟಕಿತ್ತವ ಉತ್ತರ ಕರ್ನಾಟಕದ ನಾಟಕ ಕಂಪನಿ ಸೇರಿ, ಮುದುಕನ ಮದುವೆ, ಕೊಂಡು ತಂದ ಗಂಡ, ಬೀದಿ ಬಸವ, ಉಂಡೂ ಹೋದ, ಕೊಂಡೂ ಹೋದ, ಸಮಯಕ್ಕೆ ಆದವನೇ ಗಂಡ. ಸದಾರಮೆ, ದೇವದಾಸಿ ನಾಜೂಕಯ್ಯನಾಗಿ ಬಹಳ ಫೇಮಸ್ ನಾನು ಅಂಜದ ಹೆಣ್ಣು, ತಬ್ಬಲಿ ಗಂಡು. ನಾನಾ ನಾಟಕಗಳಲ್ಲಿ ತರತರದ ಪಾರ್ಟ್ ಮಾಡಿದೆ. ನಾಟಕದಲ್ಲಿ ಮಾತ್ರವಲ್ಲ; ನಿಜ ಜೀವನದಲ್ಲೂ ಕಾಲಕ್ಕೆ ತಕ್ಕ ಕೋಲಕಟ್ಟಲು ಕಲಿತಿದ್ದು ಅಲ್ಲೇ! ಈಗ ಎಲ್ಲಿಬೇಕೋ ಅಲ್ಲಿ; ಹೇಗೆ ಬೇಕೋ ಹಾಗೆ ಬದುಕಿ, ಸುಖ ಜೀವನ ನಡೆಸೋದು ಸುಲಭವಾಗಿದೆ ನೋಡು...' ಅಮರೇಂದ್ರನ ನಿರ್ಲಿಪ್ತ ಉತ್ತರ.

'ಒಗಟು ಮಾತಾಡಬೇಡ, ಬಿಡಿಸಿ ಹೇಳೋ'

'ಒಗಟುಪಗಟೂ ಎಂಥದ್ದೂ ಇಲ್ಲ. ನಾಟಕದ ಕಂಪನಿ ಬಿಟ್ಟ ಮೇಲೆ ಚಿಕ್ಕಮಗಳೂರಿನ ಬಸರೀಕಟ್ಟೆ ಹತ್ರದ ಹಳ್ಳಿಗೆ ಬಂದೆ. ಸುಸ್ತಾಗಿ ದೇವಸ್ಥಾನದ ಜಗುಲಿ ಮೇಲೆ ಕುಳಿತಿದ್ದೆ. ಪೂಜೆಗೆಂದು ಬಂದಿದ್ದ ಭಟ್ಟರಿಗೆ, ನನ್ನ ಬ್ರಾಹ್ಮಣ ವೇಷಭೂಷಣ ಕಂಡು ಏನೆನಿಸಿತೋ ಏನೋ...

'ಯಾವೂರಾಯ್ತು...?' ವಿಚಾರಿಸಿದರು.

'ಕುಂಭಾಶಿ...'

'ಗಣಪತಿ ಪೂಜೆ ಮಾಡ್ತೀರೋ?'

'ಸ್ವಾಮಿ ಇಚ್ಛೆಯಿದ್ದರೆ ಮಾಡಕ್ಕೇನಂತೆ...'

'ನನಗೆ ವೃದ್ಧಿ. ಪೂಜೆಗಾಗಿ ಹುಡುಕಾಡುತ್ತಿದ್ದೆ. ಯಾರೂ ಸಿಗುವ ಸಂಭಾವಯಿಲ್ಲ. ಪೂಜೆ ನಿಲ್ಲಿಸುವ ಹಾಗೂಯಿಲ್ಲ. ಸ್ವಾಮಿಯೇ ನಿಮ್ಮನ್ನ ಕರೆಸಿದ್ದು ನೋಡಿ...' ಭಟ್ಟರ ಆಹ್ವಾನದ ಮೇರೆಗೆ ಸ್ನಾನ ಮಾಡಿ, ಮಡಿಯುಟ್ಟು ಪೂಜೆ ಮಾಡಿದೆ. ಸ್ವಾಮಿಗಳಿಂದ ಕಲಿತ ಪೂಜಾಮಂತ್ರ ಇಲ್ಲಿ ನೆರವಿಗೆ ಬಂತು. ಪ್ರಸಾದವಾಯ್ತು. ಭಟ್ಟರ ಕೋರಿಕೆ ಮೇರೆಗೆ ಅಲ್ಲೇ ಉಳಿದೆ. ಅವ್ರಿಗಿದ್ದವಳು ಒಬ್ಬಳೇ ಮಗಳು, ಕೋಲೆ ಬಸವಿ! ಕೆಲವು ದಿನಗಳ ಮೇಲೆ ನನಗೆ ಮದುವೆ ಮಾಡಿಸಿ, ಮನೆಅಳಿಯನಾಗಿಸಿಕೊಂಡರು. ನನಗೂ ನೆಲೆ ಸಿಕ್ಕಿ, ಸತ್ಯನಾರಾಯಣವ್ರತ, ಮದುವೆ ಮಾಡಿಸ್ತಾಯಿದ್ದೆ, ದಕ್ಷಿಣೆ ಪೊಗದಸ್ತಾಗಿ ಸಿಗ್ತಾಯಿತ್ತು. ಹಾಯಾಗಿದ್ದೆ.'